# ಕರ್ನಾಟಕ ವಿಧಾನ ಪರಿಷತ್ತು

ಪ್ರಶ್ನೆ ಸಂಖ್ಯೆ ಗುರುತಿಲ್ಲದ : 1354
ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 30.12.2022
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಯಂತ್ರೋಪಕರಣಗಳ ಖರೀದಿಯಲ್ಲಿ ಸಬ್ಸಿಡಿ ಘೋಷಿಸುವಲ್ಲಿ ವಿಳಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಬ್ಸಿಡಿ ಘೋಷಿಸುವಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದಿತ ಕ್ರಿಯಾ ಯೋಜನೆಯು ಬರುವುದು ತಡವಾಗಿರುವುದರಿಂದ ಹಾಗೂ ಸರಬರಾಜುದಾರರ ನೋಂದಣಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಂಸ್ಥೆಗಳು ಭಾಗವಹಿಸಿರುವುದರಿಂದ ಕೃಷಿ ಯಂತ್ರೋಪಕರಣಗಳ ಖರೀದಿಯಲ್ಲಿ ಸಬ್ಸಿಡಿ ಘೋಷಿಸುವಲ್ಲಿ ವಿಳಂಭವಾಗಿರುತ್ತದೆ. ಆದರೆ, ಈಗಾಗಲೇ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಪಂಪ್‌ಸೆಟ್ ಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಯಂತ್ರೋಪಕರಣಗಳಿಗೆ ಯಂತ್ರೋಪಕರಣವಾರು ಸಬ್ಸಿಡಿಯನ್ನು ಘೋಷಿಸಲಾಗಿರುತ್ತದೆ. |
| ಆ) | 2021-22ರ ಆಯವ್ಯಯದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಎಷ್ಟು ಅನುದಾನವನ್ನು ನಿಗಧಿಗೊಳಿಸಲಾಗಿದೆ; ಖರ್ಚಾದ ಅನುದಾನ ಎಷ್ಟು? | 2021-22ರ ಆಯವ್ಯಯದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ನಿಗಧಿಪಡಿಸಿದ ಮತ್ತು ಖರ್ಚಾದ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ:<br>(ರೂ. ಲಕ್ಷಗಳಲ್ಲಿ)<br>ನಿಗಧಿಪಡಿಸಿದ ಅನುದಾನ: 41682.59<br>ಖರ್ಚಾದ ಅನುದಾನ: 41475.68 |

ಸಂಖ್ಯೆ : AGRI –ASC/112/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು